**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನ ಸಭೆ**
**ಹದಿಮೂರನೇ ಅಧಿವೇಶನ**
**(ಮುಂದುವರೆದ ಉಪವೇಶನ)**

# ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-7)**

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 94ಸಿಸಿ ಪ್ರಕರಣದ ತಿದ್ದುಪಡಿ.**-ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) 94ಸಿಸಿ ಪ್ರಕರಣದ (viii)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಕೆಳಗಿನ ಕೋಷ್ಟಕದ (2)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಪೌರಸಭಾ ನಿಗಮಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯತ್‌ಗಳ ಪರಿಮಿತಿಗಳಿಂದ ಅದರ (3)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಅಂಥ ಅಂತರದೊಳಗೆ ಇರುವ ಪ್ರದೇಶಗಳಲ್ಲಿ, 30x40 ಅಡಿ ಅಳತೆಯ ನಿವೇಶನ ಅಥವಾ ಪ್ಲಾಟಿನಲ್ಲಿರುವ ವಾಸದ ಮನೆ ಅಥವಾ ವಾಸದ ಮನೆಯ ವಾಸ್ತವಿಕ ನಿರ್ಮಿತ ಪ್ರದೇಶ, ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು, ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಇತರ ಷರತ್ತುಗಳನ್ನು ಪೂರೈಸುವುದಕ್ಕೆ ಒಳಪಟ್ಟು ಮಂಜೂರು ಮಾಡಬಹುದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ ಸಂಖ್ಯೆ 12) 94ಸಿಸಿ ಪ್ರಕರಣವನ್ನು ಸದರಿ ಪ್ರಕರಣದಲ್ಲಿರುವ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿದ ಅಂಥ ಪೌರಸಭಾ ನಿಗಮಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯತ್‌ಗಳ ಪರಿಮಿತಿಗಳಿಂದ ಅಂಥ ಅಂತರಗಳೊಳಗೆ ಇರುವ ಪ್ರದೇಶಗಳಲ್ಲಿ 30x40 ಅಡಿ ಅಳತೆಯ ವಾಸದ ಮನೆಗಳನ್ನು ಸಕ್ರಮಗೊಳಿಸುವುದಕ್ಕಾಗಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕಾಗೋಡು ತಿಮ್ಮಪ್ಪ**
ಕಂದಾಯ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

**ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) ಉದ್ಧೃತ ಭಾಗ**

**XX XX XX**

**94ಸಿಸಿ. ನಗರ ಪ್ರದೇಶದಲ್ಲಿನ ಆಕ್ರಮಿತ ಭೂಮಿಯಲ್ಲಿನ ವಾಸದ ಮನೆಯ ನಿರ್ಮಾಣದ ಪ್ರಕರಣದಲ್ಲಿ ಭೂ ಮಂಜೂರಾತಿ.– XX XX XX**

(viii) ನಿವೇಶನ ಅಥವಾ ಪ್ಲಾಟ್‌ನಲ್ಲಿ 20'X30' ಅಡಿಯನ್ನು ಮೀರದಂಥ ಪ್ಲಿಂತ್ ಏರಿಯಾವುಳ್ಳ ವಾಸದ ಮನೆ ಅಥವಾ ವಾಸದ ಮನೆಯ ವಾಸ್ತವ ನಿರ್ಮಿತ ಪ್ರದೇಶ ಇವುಗಳಲ್ಲಿ ಯಾವುದು ಕಡಿಮೆಯೊ ಅದನ್ನು ಸಕ್ರಮಗೊಳಿಸತಕ್ಕದ್ದು.

**XX XX XX**

**ಕೋಷ್ಟಕ**

| ಕ್ರಮ ಸಂಖ್ಯೆ | ಪ್ರದೇಶಗಳು | ಅಂತರ |
|---|---|---|
| (1) | (2) | (3) |
| 1. | ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976 ಅಡಿಯಲ್ಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | 18 ಕಿ.ಮೀ. |
| 2. | ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976ರ ಉಪಬಂಧಗಳಡಿಯಲ್ಲಿ ಬರುವ ಅನುಕ್ರಮವಾಗಿ ಬೆಳಗಾವಿ, ಗುಲ್ಬರ್ಗಾ, ಹುಬ್ಬಳ್ಳಿ–ಧಾರವಾಡ, ಮಂಗಳೂರು ಮತ್ತು ಮೈಸೂರು | 10 ಕಿ.ಮೀ. |
| 3. | ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಅಡಿಯಲ್ಲಿನ ಎಲ್ಲಾ ನಗರ ಸಭೆಗಳು | 5 ಕಿ.ಮೀ. |
| 4. | ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976ರ ಅಡಿಯಲ್ಲಿನ ಇತರೆ ಪೌರನಿಗಮಗಳು | 10 ಕಿ.ಮೀ |
| 5. | ಟಿಎಂಸಿಗಳು ಮತ್ತು ಪಟ್ಟಣ ಪಂಚಾಯಿತಿಗಳು | 3 ಕಿ.ಮೀ |

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಪಿ7, ಕಾಸೂ , 1129–ಪ್ರತಿಗಳು 1000, 16ನೇ ಮಾರ್ಚ್, 2017

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
THIRTEENTH SESSION
(Adjourned Meetings)

# THE KARNATAKA LAND REVENUE (SECOND AMENDMENT) BILL, 2017
**(L.A. Bill No. 7 of 2017)**

A Bill further to amend the Karnataka Land Revenue Act, 1964.

Whereas it is expedient further to amend the Karnataka Land Revenue Act, 1964 (Karnataka Act 12 of 1964) for the purposes hereinafter appearing;

Be it enacted by the Karnataka State Legislature in the Sixty-Eighth year of the Republic of India, as follows:-

**1. Short title and commencement.**- (1) This Act may be called the Karnataka Land Revenue (Second Amendment) Act, 2017.

(2) It shall come into force at once.

**2. Amendment of section 94CC.**- In section 94CC of the Karnataka Land Revenue Act, 1964 (Karnataka Act 12 of 1964), in clause after clause (viii), the following shall be inserted, namely:-

"Provided that, in the areas lying within such distance as specified in column(3) of the table below from the limits of the Municipal Corporations, Municipalities and Town Panchayats specified in column(2) thereof, a dwelling house in a site or plot of land measuring 30x40 feet or actual built up area of the dwelling house whichever is less, may be granted subject to fulfillment of other conditions specified in this section. "

## STATEMENT OF OBJECTS AND REASONS

It is considered necessary to amend section 94CC of the Karnataka Land Revenue Act, 1964 for the regularization of dwelling houses to the extent of 30x40 feet in the areas lying within such distance from the limits of such Municipal Corporations, Municipalities and Town Panchayats specified in the Table in the said section.

Hence, the Bill.

## FINANCIAL MEMORANDUM

There is no extra expenditure involved in the proposed Legislative measure.

**KAGODU TIMMAPPA**
Minister for Revenue

**S. Murthy**
Secretary (I/C)
Karnataka Legislative Assembly

## ANNEXURE

**EXTRACT FROM THE KARNATAKA LAND REVENUE ACT, 1964 (KARNATAKA ACT 12 OF 1964)**

**XX XX XX**

**94CC. Grant of Land in case of construction of dwelling house in occupied land in urban area.-**

**XX XX XX**

(viii) The plinth area of a dwelling house in a site or plot of land not exceeding 20' x 30' feet or actual built up area of the dwelling house whichever is less than be regularized.

**XX XX XX**

TABLE

| Sl.No. | Places | Distance |
|---|---|---|
| 1. | Bruhat Bangalore Mahanagaraplaike under the Karnataka Municipal Corporations Act, 1976 | 18 kms |
| 2. | The Cities of Belgaum, Gulbarga, Hubli-Dharwad, Mangalore and Mysore respectively under the provisions of Karnataka Municipal Corporations Act, 1976 | 10 kms |
| 3. | All City Municipalities under the Karnataka Municipalities Act, 1964 | 5 kms |
| 4. | Other Municipal Corporations under the Karnataka Municipal Corporations Act, 1976 | 10 kms |
| 5. | TMCs and Town Panchayats | 3 kms |

**XX XX XX**

Government Press, Vikasa Soudha Unit, Bengaluru 16th March, 2017 P7, W.D.1129, Copies 1000